Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 21-28

# ಅಕ್ಕಮಹಾದೇವಿಯ ವಚನಗಳಲ್ಲಿ ಸಾಹಿತ್ಯ ಸೌಂದರ್ಯ

**ಲೋಹಿತ್.ಪಿ**

**ಲೋಹಿತ್.ಪಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಅಕ್ಷರ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್
ಚೆನ್ನಮುಂಬಾಪುರ,
ಜೆ.ಎನ್.ಎನ್.ಸಿ.ಇ.ಕಾಲೇಜ್
ಎದುರು,ಶಿವಮೊಗ್ಗ.

ವಚನ ಶರಣರು ಕನ್ನಡಕ್ಕೆ ಕೊಟ್ಟ ಕಾಣಿಕೆ, ಈ ವಚನಗಳು ತಮ್ಮ ರೂಪ, ಸ್ವರೂಪದಿಂದ ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿ ವಿಶ್ವ ಸಾಹಿತ್ಯದ ದೃಷ್ಟಿಯಿಂದ ಕನ್ನಡದ ಬೆಲೆಯನ್ನು ಹೆಚ್ಚಿಸಿದೆ. ಶರಣರ ವಿಚಾರ ಕ್ರಾಂತಿ, ಎಲ್ಲ ರಂಗಗಳನ್ನು ವ್ಯಾಪಿಸಿ, ನವಚೇತನವನ್ನು ತುಂಬಿದೆ. ಕನ್ನಡದ ಭಾಗ್ಯದ ಬಾಗಿಲು ತಾನರಿಯದಂತೆಯೇ ತೆರೆದುಕೊಂಡಿತು. ಶರಣರು ತಮ್ಮ ಆಧ್ಯಾತ್ಮಿಕ ಸಾಧನೆಯ ಅನುಭವಗಳನ್ನೂ, ಸಮಾಜದ ರೀತಿ–ನೀತಿಗಳನ್ನೂ, ಓರೆ ಕೋರೆಗಳನ್ನೂ, ಎಲ್ಲರಿಗೂ ತಿಳಯುವ ಮಾತುಗಳಲ್ಲಿ ಹೇಳಬೇಕಾಗಿತ್ತು. ಶರಣರು ಲೋಕಕಲ್ಯಾಣಕರವಾದ ತಮ್ಮ ಉದ್ದೇಶ ಸಾಧನೆಗಾಗಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮಾರ್ಗವನ್ನೇ ರೂಢಿಸಬೇಕಾಯಿತು. ವಚನಗಳು ಪದ್ಯಗಳಲ್ಲ, ಗದ್ಯರೂಪವಾದವುಗಳು. ಗದ್ಯಶೈಲಿ ಅಂದಿನ ಚಂಪೂ ಗ್ರಂಥಶೈಲಿಯಲ್ಲಿ ಅಥವಾ ಆಡುಮಾತಿನ ನೀರಸ ನಿರೂಪಣೆಯೂ ಅಲ್ಲ, ಪದ್ಯಶೈಲಿಯ ಭಾವ ಸೌಂದರ್ಯ, ಗದ್ಯದ ವಿಚಾರ ಪ್ರತಿಪಾದನೆ, ಎರಡನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ ಗದ್ಯ ಗೀತೆಗಳೆಂದು ವಚನಗಳನ್ನು ಕರೆಯಬಹುದು.

ಶರಣ ಜೀವನ ಬಹುಮುಖವಾದ್ದು, ಕೆಲವರಂತೂ ಒಂದು ಕಡೆ ಸಾಧಕರು, ಇನ್ನೊಂದು ಕಡೆ ಸಮಾಜ ಸೇವಕರು; ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗರು, ಕ್ರಾಂತಿಕಾರರು, ಆದರೂ ತಮ್ಮ ದಿನನಿತ್ಯದ ಕಾಯಕವನ್ನು ನಮ್ರಭಾವದಿಂದ ಮಾಡುವ ಕುಶಲಕರ್ಮಿಗಳು, ಜೀವನವನ್ನೂ ತೆರೆದ ಕಣ್ಣಿನಿಂದ ನೋಡಿದವರು. ಲೋಕದ ಕಷ್ಟಗಳನ್ನು ಸುತ್ತು–ನಿಂದೆಗಳನ್ನು ಸಮಾನವಾಗಿ ಸ್ವೀಕರಿಸಿದವರು. ನೂರಾರು ಕಡೆಯಿಂದ ತಮ್ಮ ಅನುಭವದ ಬುತ್ತಿಯನ್ನು ಪಡೆದು ಅವರ ಚೇತನ ಶ್ರೀಮಂತವಾಗಿದೆ. ತಮ್ಮೆಲ್ಲ ಅಪಾರವಾದ ಅನುಭವವನ್ನು ಅನ್ಯ

ಹೃದಯ ವೇದ್ಯವಾಗುವಂತೆ ಹೇಳುವ ಶರಣರ ಶಕ್ತಿಯೇ ಅಪೂರ್ವವಾದ ಸಿದ್ಧಿ. ಅವರು ಕೊಡುವ ಅಲಂಕಾರಗಳು, ಬಳಸುವ ಉಪಮಾನಗಳು, ಹೋಲಿಕೆಗಳು ಸಾದೃಶ್ಯಗಳು, ಗಾದೆಯಂತೆ ಸೂತ್ರರೂಪವಾದ ಮಾತುಗಳೂ, ಎಲ್ಲವೂ ಅವರ ಅಪಾರವಾದ ಲೋಕಾನುಭವಕ್ಕೂ ಲೋಕ ಕಾರಣ್ಯಕ್ಕೂ ಸಾಕ್ಷಿಯಾಗಿದೆ.

ಶರಣರು ಅಲಂಕಾರಗಳನ್ನು ಉಪಯೋಗಿಸುವುದು ತಮ್ಮ ವಚನಗಳು ಸಾಹಿತ್ಯ ಕೃತಿಗಳಾಗಬೇಕೆಂಬುದಕ್ಕಾಗಿಯಲ್ಲ. ಅವರ ಅನುಭವವನ್ನು ಅಭಿವ್ಯಕ್ತಗೊಳಸುವ ಸಾಧನವಾಗಿ ಅವು ಮೈವೆತ್ತಿದೆ. ವಾಸ್ತವವಾಗಿ ಎಲ್ಲ ಉತ್ತಮವಾದ ಸಾಹಿತ್ಯ ಕೃತಿಯಲ್ಲಿಯೂ ಅಲಂಕಾರಗಳು ಬರಬೇಕಾದುದೇ ಹೀಗೆ ಉಪಮಾನ ಮೊದಲಾದ ಅರ್ಥಾಲಂಕಾರಗಳ ಮಾತು ಹಾಗಿರಲಿ, ಸ್ವಲ್ಪ ಮಟ್ಟಿಗೆ ಬಹಿರ್ ರೂಪವಾದ ಶಬ್ದಾಲಂಕಾರಗಳೂ ಅಷ್ಟೊಂದು ಸಹಜವಾಗಿ ಸುಂದರವಾಗಿ ರೂಪುಗೊಂಡಿದೆ. ಕೆಲವು ವಚನಗಳಲ್ಲಿ ಅವುಗಳದೇ ಆದ ಒಂದು ಲಯ, ಗತಿ ಕಂಡುಬರುತ್ತದೆ. ಯಮಕ, ಪ್ರಾಸ, ಅನುಪ್ರಾಸ ಶ್ಲೇಷ ಮೊದಲಾದ ಶಬ್ದಾಲಂಕಾರಗಳೂ ವಚನದ ಅಂಗಗಳಂತೆ ಮೈವೆತ್ತಿರುವುದು ಕಂಡುಬರುತ್ತದೆ.

ಜನರಾಡುವುದು ವಚನ, ಅಂದರೆ ಗದ್ಯವೇ, ಶರಣರ ವಚನಗಳೂ ಗದ್ಯಾತ್ಮಕವಾಗಿವೆ. ಹಾಗೆ ಹೇಳದರೂ ವಚನ ಬರಿಯ ಗದ್ಯವಲ್ಲ, ಗದ್ಯಕ್ಕೆ ಲಯ ಸೇರಿ ಅದು ಪದ್ಯಾತ್ಮಕವೂ ಭಾವಸೌಂದರ್ಯ, ಗದ್ಯದ ವಿಚಾರ, ಪ್ರತಿಪಾದನೆ ಎರಡನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ 'ಗದ್ಯಗೀತೆ' ಗಳೇ ವಚನಗಳೇನ್ನಬಹುದು. ವಚನಕಾರರು ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಿರಲಿಲ್ಲ. ಗದ್ಯವನ್ನೇ ಪದ್ಯದ ಪಟ್ಟಕ್ಕೇರಿಸಿದರು ಎಂಬ ಸಾ.ಶಿ. ಮರುಳಯ್ಯನವರ ಮಾತು ಅರ್ಥಪೂರ್ಣವಾದುದು. ಈ ಗದ್ಯ ಕ್ಲಿಪ್ತ ಛಂದಸ್ಸನ್ನು ತೊರೆದಿದ್ದರೂ ಅದರ ಮೈಕಟ್ಟೂ ಆಛಂದವಾದುದಲ್ಲ. ಅದು ಗದ್ಯ ರೂಪಣ ಮಾಡಿದ್ದರೂ ಕಾವ್ಯತ್ಮವನ್ನು ಬಿಟ್ಟಿಲ್ಲ. ಆ ಗದ್ಯದ ಪ್ರಕಾರಂತವೇ ವಚನಸಾಹಿತ್ಯವಾಗಿ ಹೂ ಬಿಟ್ಟೀತು. ವಚನಗಳೂ ಆ ಗದ್ಯದಿಂದ ಹೊಮ್ಮಿದ ಬಿಡಿಬಿಡಿಯ ಕಿಡಿ ಹೂಗಳೂ ಎಂದರೂ ಕುವೆಂಪು. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ-ಪದ್ಯದ ನಡುವಿನ ಒಂದು ಮಾದರಿ. ವಚನಗಳಲ್ಲ ಗದ್ಯದ ನಿರರ್ಗಗಳತೆಯಿಲ್ಲದಿದ್ದರೂ, ಅದರ ಸರಳತೆಯಿದೆ. ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ. ಎಂದು ಅಭಿಪ್ರಾಯಪಡುತ್ತಾರೆ ಬಸವನಾಳು ಶಿವಲಿಂಗಪ್ಪನವರು.

ವಚನ ಸಾಹಿತ್ಯ ಕನ್ನಡದ ಮಹತ್ವದ ಕೊಡುಗೆ. ಭಾರತೀಯ ಭಾಷೆಗಳಲ್ಲಿ, ಬೇರೆ ಯಾವ ಭಾಷೆಯಲ್ಲೂ ಈ ಪ್ರಕಾರದ ಸಾಹಿತ್ಯವಿಲ್ಲದಿರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ವಿಶ್ವ ಸಾಹಿತ್ಯದಲ್ಲಿ ಇದೊಂದು ಅಪರೂಪದ ಕೊಡುಗೆಯೆಂದೂ ಕೆಲವರು ಗುರುತಿಸಿದ್ದಾರೆ. ವಚನ ಸಾಹಿತ್ಯದಂತಹ ಉದಾಹರಣೆಗಳು, ಸರಳವಾಗಿ, ಕ್ವಚಿತ್ತವಾಗಿ, ಬಿಡಿಬಿಡಿಯಾಗಿ ಇತರ ಭಾಷೆಗಳ

ಸಾಹಿತ್ಯದಲ್ಲಿ ಸಿಕ್ಕಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ಮಾರ್ಪಟ್ಟದ್ದು ಕನ್ನಡದಲ್ಲಿಯೂ ಎಂದು ನಿಸ್ಸಂಶಯವಾಗಿ ಹೇಳಬಹುದು. ವಚನ ಸಾಹಿತ್ಯದ ಕನ್ನಡ ನುಡಿ, ವಿಶ್ವ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರು ಹೆಮ್ಮೆಪಡಬಹುದಾಗಿದೆ ಎಂದು ಹೇಳಿದ ಪ್ರೋ.ಶಿ.ಶಿ.ಬಸವನಾಳರ ಮಾತು ಸತ್ಯವಾಗಿದೆ. ಕನ್ನಡದ ವಿಶಿಷ್ಟ ರೂಪವಾದ, ಬಸವಣ್ಣನವರಿಗಿಂತ ತುಸುಮುಂಚಿತವಾಗಿ ಪ್ರಾರಂಭವಾದ ವಚನ ರಚನೆ, ಬಸವಣ್ಣ ಹಾಗೂ ಅವರ ಸಮಕಾಲೀನರ ಅಭಿವ್ಯಕ್ತಿಯ ಮಾಧ್ಯಮವಾಯಿತು. ಅದರಿಂದಾಗಿ ವಚನ ಸಾಹಿತ್ಯಕ್ಕೆ ಆಳ ವಿಸ್ತಾರಗಳು ದೊರಕಿದವು. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಅನನ್ಯವಾದ ಪ್ರಕಾರವಾಗಿದ್ದರೂ ಅದನ್ನು ಸೃಷ್ಟಿಸಿದವರು ಕೇವಲ ಸಾಹಿತಿಗಳಾಗಿರಲಿಲ್ಲ. ಅವರೆಲ್ಲ ಸತ್ಯಾನ್ವೇಷಿಗಳಾಗಿದ್ದರು. ಆಧ್ಯಾತ್ಮ ಸಾಧಕರಾಗಿದ್ದರು.

ಅಕ್ಕನ ವಚನಗಳು ಅವಳ ಸಾಧನೆಯ ಮಧುರಭಕ್ತಿಯಿಂದ ತುಂಬಿಕೊಂಡು ಒಂದು ವಿಶಿಷ್ಟ ರೀತಿಯಲ್ಲಿ ಸಾಗುತ್ತದೆ. ಅವಳ ಜೀವನ ವ್ಯಕ್ತಿತ್ವಕ್ಕೆ, ವಿಕಸನಕ್ಕೆ ಚನ್ನಮಲ್ಲಿಕಾರ್ಜುನನೇ ಆದಿ ಅಂತ್ಯ, ಅಕ್ಕ ಭಾವುಕಳಾಗಿರುವಂತೆ, ವೈಚಾರಿಕಳೂ, ಜೀವನವನ್ನು ಹೊಸ ರೀತಿಯಲ್ಲಿ ಅರ್ಥೈಸುವ ಚಿಂತನಶೀಲಳೂ ಆಗಿರುವುದು ಗಮನಾರ್ಹವಾಗಿದೆ. ಮಹಾದೇವಿಯಕ್ಕನ ಶರಣಸತಿತ್ವದ ಅನುಭವ ನಮ್ಮ ಸಾಹಿತ್ಯದಲ್ಲಿಯೇ ಅನನ್ಯವಾಗಿರುವುದನ್ನು ಕಾಣುವುದಕ್ಕೆ ಅವಳ ಸ್ತ್ರೀತ್ವ ಮತ್ತು ಕವಿತ್ವಗಳೆರಡೂ ಕಾರಣವಾಗಿದೆಯೆಂದು ಹೇಳಬಹುದು. ಮಹಾದೇವಿ ಚನ್ನಮಲ್ಲಿಕಾರ್ಜುನನನ್ನು ಕಾಣಲು ಸೇರಲು ತವಕಿಸುತ್ತಿರುವ ಸಂದರ್ಭಗಳಲ್ಲಿ ಪಡುವ ವಿರಹ, ವ್ಯಥೆಯಲ್ಲಿ, ಕಂಡುಬರುವ ತನ್ಮಯತೆಯಲ್ಲಿ, ಉಜ್ವಲ ಮತ್ತು ವಿಶೇಷತೆಗಳೆರೆಡೂ ಇರುವುದು ಕಂಡುಬರುತ್ತದೆ. ಅನುಭವಗಳು ಇಲ್ಲಿ ಸಂಕೇತಗಳಾಗಿ, ಪ್ರತಿಮೆಗಳಾಗಿ ಆಧ್ಯಾತ್ಮಿಕವಾಗಿ ಅನುಭವವನ್ನು ನೀಡುತ್ತವೆ. ಕೆಳಗಿನ ವಚನಗಳು ಅವಳ ಕವಿಯತ್ರಿಯ ಪಕ್ತಿಯನ್ನು ಬಿಂಬಿಸುತ್ತದೆ.

ಅರಿಸಿನವನೆ ಎಂದು ಹೊಂದೊಡಿಗೆಯನ್ನೆ ತೊಟ್ಟು
ದೇವಾಂಗವನುಟ್ಟು ಪುರುಷ ಬಾರಾ, ಪುರುಷ ರತ್ನವೇ ಬಾರಾ
ನಿನ್ನ ಬರುವನ್ನಸುವಿನ ಬರವು ಬಾರಯ್ಯ
ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು
ಬಟ್ಟೆಗಳ ನೋಡಿ ಬಾಯೊರುತ್ತಿಹನು.

ವಧುವು, ತಾನಾಗಿ ತನ್ನ ಇನಿಯನಿಗೆ ಕಾತರಿಸುತ್ತಿರುವ ಅಕ್ಕನ ಅಭಿವ್ಯಕ್ತಿ ಸಾಮರ್ಥ್ಯ ಮೆಚ್ಚುವಂತಹುದು. ಭಾವಿ ಪತಿಯ ಬರುವಿಕೆಯನ್ನು ನೀರೀಕ್ಷಿಸುವಂತಹ ಕಾತರ ಇಲ್ಲಿಯದು. ಆದರೆ ನಿರೀಕ್ಷಿಸಿದಂತೆ ಆತ ಬಾರದಿದ್ದಾಗ.

ಕಳವಳದ ಮನವು ತಲೆಕೆಳಗಾದುದವ್ವ,

ಸುಳಿದು ಬೀಸುವ ಗಾಳಿ ಉರಿಯಯಿತವ್ವ,

ಬೆಳದಿಂಗಳು ಬಿಸಿಲಾಯಿತ್ತು ಕಳದಿ

ಹೊಳಲ ಸುಂಕಿಗನಂತೆ ತೊಳಲುತ್ತಿದ್ದನವ್ವಾ......

ಈ ಬಗೆಯ ತಳಮಳ ಆಕೆಯದು, ಸುಳಿದು ಬೀಸುವ ಗಾಳಿ, ಉರಿಯಾಗುವ ಬೆಳದಿಂಗಳು ಬಿಸಿಲಾಗುವ ದೃಷ್ಟಾಂತಗಳು ಆಕೆಯ ತೀವ್ರಾನುಭವನ್ನೇ ಪ್ರತಿನಿಧಿಸುತ್ತವೆ. ಕೊನೆಯವರೆಗೂ ಉಳಿದುಕೊಂಡು ಬಂದಿರುವ ಆ'ಳ' ಕಾರ ಪ್ರಾಸ ಅವಳ ಕಳವಳವನ್ನು ಅಂತಃ ಕರಣಕ್ಕೆ ನಾಟಿಸುವಂತೆ ಮಾಡುತ್ತದೆ.

**ಪ್ರಕೃತಿ ವಚನಗಳಲ್ಲಿ ಸಾಹಿತ್ಯಕ ಸೌಂದರ್ಯ:**

ಮಲ್ಲಿಕಾರ್ಜುನನನ್ನು ಕಂಡುಕೊಳ್ಳೂವಲ್ಲಿಯೂ ಅಕ್ಕಮಹಾದೇವಿಯ ಪ್ರಕೃತಿ ಪ್ರೇಮ ನಿಸರ್ಗದ ಬಗೆಗಿನ ಒಲುವುಗಳನ್ನು ವಿಸ್ಮಯ ಭಾವನೆಗಳನ್ನು ಕೆಲವು ವಚನಗಳಂದ ನಾವು ನೋಡಬಹುದು.

ಈಳೆ, ನಿಂಬು, ಮಾವು ಮೊದಲಕ್ಕೆ

ಹುಳಿನೀರೆನೆರೆದವರಾರಯ್ಯ

ಕಬ್ಬು ಬಾಳೆ ಹಲಸು ನಾರಿವಾಳಕ್ಕೆ

ಸಿಹಿನೀರುನೆರೆದವರಾರಯ್ಯ

ಕಳೆವೆ ರಾಜಾನ್ನ ಶಾಲ್ಯನ್ನಕ್ಕೆ

ಓಗರದ ಉದಕವನೆರೆದವರಾರಯ್ಯ .......

ಈ ವಚನಗಳಲ್ಲಿ ಕಂಡುಬರುವ ಪ್ರಕೃತಿಯ ವೈವಿಧ್ಯ ಅವಳ ಮನಸ್ಸನ್ನು ಸೂರೆಗೊಂಡಿದೆ. ಇವುಗಳ ಅಂತರ್ಯದಲ್ಲಿಯೇ ತನ್ನ ಆರಾಧ್ಯ ದೈವವನ್ನು ಕಂಡುಕೊಳ್ಳಲು ಅಕ್ಕ ಪ್ರಯತ್ನಿಸುತ್ತಾಳೆ. ದೃಷ್ಟಾಂತಗಳ ಮೂಲಕ ಪರಮಾತ್ಮನ ಇರುವಿಕೆಯನ್ನು ಚಿತ್ರಿಸಿರುವುದು ಅವಳ ಕಲ್ಪಕ ಶಕ್ತಿಗೆ ಪ್ರತಿಭಾಸೃಷ್ಟಿಗೆ ಒಂದು ಕುರುಹಾಗಿದೆ.

ಬದುಕಿನಲ್ಲಿ ಬರುವ ಅನೇಕ ಎಡ್ರು ತೊಡರುಗಳನ್ನು ಧಿಕ್ಕರಿಸಿದ ಸ್ವಾಭಿಮಾನ ಅಕ್ಕ. ಬದುಕಿನಲ್ಲಿ ಬರುವ ಎಲ್ಲ ಪ್ರತಿರೋಧವನ್ನು ಒಳಗಿನ ವಚನ ಮನಮುಟ್ಟುವಂತೆ ವರ್ಣಿಸುತ್ತದೆ. ಹಾಗೆಯೇ ದೃಷ್ಟಾಂತದ ಮೂಲಕ ಬದುಕಿನ ನೈಜಸ್ಥಿತಿಯನ್ನು ಕಟ್ಟೀಗೆ ಕಟ್ಟುವಂತೆ ಚಿತ್ರಿಸುವ ಒಂದು ಪ್ರತಿಮೆಯಾಗಿದೆ.

ಬೆಟ್ಟದ ಮೇಲೊಂದು ಮನೆಯಮಾಡಿ

ಮೃಗಗಳಿಗಂಜಿದಡೆಂತಯ್ಯಾ?

ಸಮುದ್ರದ ತಡಿಯಲೊಂದು ಮನೆಯಮಾಡಿ

ನೊರೆ–ತೆರೆಗಳಗಂಜಿದಡೆಂತಯ್ಯ?

ಸಂತೆಯೊಳಗೊಂದು ಮನೆಯಮಾಡಿ .......

ಚನ್ನಮಲ್ಲಿಕಾರ್ಜುನನ್ನು ಕಾಣಲು ಹೊರಟಿರುವ ಅವಸ್ಥೆಯಲ್ಲಿ ಪ್ರಕೃತಿಯ ಚರಾಚರ ವಸ್ತುಗಳನ್ನು ಪ್ರಶ್ನಿಸುವ ಅದರ ಮೊರೆಹೋಗುವ ರೀತಿಯನ್ನು ನೋಡಿದಾಗ ಅದು ಭಾವಗೀತೆಯ ಲಕ್ಷಣವನ್ನು ಸೂಚಿಸುತ್ತದೆ. ಗಿರಿಯಾಳು ವನದೊಳು ಗಿಡಗಿಡದತ್ತ ಜೀವ, ಎನ್ನ ದೇವ ಬಾರಯ್ಯ ನಿಮ್ಮ ಕರುಣೇನೆಂದು ಎಂಬಲ್ಲಿ.

ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿತೆ ಎಂದು ಹೇಲುವಲ್ಲಿ ವ್ಯಕ್ತವಾಗಿರುವ ಭಾವತೀವ್ರತೆ ಮನಸ್ಸನ್ನು ಸೆರೆಹಿಡಿಯುವಂತಹುದು.

ಚಿಲಿಮಿಲಿ ಎಂದೋದುವ ಗಿಳಿಗಳಿರಾ,

ನೀವು ಕಾಣಿರೆ, ನೀವು ಕಾಣಿರೆ

ಸರವೆತ್ತಿ ಪಾಡುವ ಕೋಗಿಲೆಗಳಿರಾ

ನೀವು ಕಾಣಿರೆ, ನೀವು ಕಾಣಿರಾ.......

ಗಿಳಿ, ಕೋಗಿಲೆ, ತುಂಬಿ, ಹಂಸೆ, ನವಿಲುಗಳ ವೈಶಿಷ್ಟ್ಯವನ್ನು ಹೇಳಿ, ಅವುಗಳ ತೀರ ಆತ್ಮೀಯತೆಯ ಭಾವದಿಂದ. ಅವುಗಳನ್ನು ಲಂಭೋದಿಸಿ ಚನ್ನಮಲ್ಲಿಕಾರ್ಜುನನ ನೆಲೆಯನ್ನು ಪ್ರಶ್ನಿಸುವ ರೀತಿಯ ಅಪಾಯಮಾನವಾಗಿದೆ. ಏಕತಾನತೆ ಎದೆಬಿಡದೆ ಅವಳ ಮನಸ್ಸಿನ ಅಭೀಸ್ಸೆಯಾಗಿ ಕಾತರೆಯಾಗಿ ಊಡಿ ಅಭಿವ್ಯಕ್ತಿಯ ಸ್ವಾರಸ್ಯವನ್ನು ಹೆಚ್ಚಿಸುತ್ತದೆ. ಇಡೀ ವಚನ ಲಯಸಂಯೋಜನೆಯನ್ನು ಪಡೆದುಕೊಂಡಿದ್ದು ಪದ್ಯದ ಮಾಧುರ್ಯವನ್ನು ಇನ್ನಷ್ಟು ಹೆಚ್ಚುವಂತೆ ಮಾಡುತ್ತದೆ.

ನಿಸರ್ಗದ ವಸ್ತುಗಳನ್ನು ತನ್ನ ಭಾವನೆಗಲ ಅಭಿವ್ಯಕ್ತಿಯಾಗಿ ಬಳಸಿಕೊಳ್ಳುವಲ್ಲಿ ಮಹಾದೇವಿಯು ತೋರಿದ ಹಿರಿಮೆ. ಓದುಗರನ್ನು ಆಕರ್ಷಿಸುತ್ತದೆ. ಪ್ರಕೃತಿಯ ವಸ್ತುಗಳು ಉಪಮಗಳಾಗಿ ದೃಷ್ಟಾಂತಗಳಾಗಿ ಮೇಲಿಂದ ಮೇಲೆ ಮಹಾದೇವಿಯ ವಚನಗಳಲ್ಲಿ ಕಂಡುಬರುತ್ತದೆ.

ಶಬ್ದಕ್ಕೆ ನಾಚಿದಡೆಂತಯ್ಯ

ಚನ್ನಮಲ್ಲಿಕಾರ್ಜುನನ ದೇವ ಕೇಳಯ್ಯ

ಲೋಕದೊಳಗೆ ಹುಟ್ಟಿದ ಬಳಿಕ

ಸ್ತುತಿ ನಿಂದೆಗಳು ಬಂದರೆ

ಮನದಲ್ಲಿ ಕೋಪದ ತಾಳದೆ ಸಮಧಾನಿಯಾಗಿರಬೇಕು. ಸಮಾಜದ ಸ್ತುತಿ ನಿಂದೆಗಳನ್ನು ಸಮಾಧಾನದಿಂದ ಸ್ವೀಕರಿಸಬೇಕೆಂಬ ಅಕ್ಕಮಹಾದೇವಿ ಜ್ಞಾನಿ. ಪ್ರಕೃತಿ ವಿಕೋಪಗಳನ್ನು, ಹಸಿವು ತೃಪೆಗಳನ್ನು ಮೀರಿನಿಲ್ಲುವ ಎದೆಗಾರಿಕೆಯುಳ್ಳವಳು. ಅವಳ ಈ ದಿಟ್ಟ ಎದೆಗಾರಿಕೆ ಸಮರ್ಪಣ ಭಾವವೇ ಮುಖ್ಯ ಕಾರಣವಾಗಿದೆ.

ಕಠಿಣ ಪರೀಕ್ಷೆಗಳು ಎದುರಾದಂತೆಲ್ಲಾ ಅವಳ ವ್ಯಕ್ತಿತ್ವ ಹೆಚ್ಚುತ್ತಾ ಪ್ರಖರವಾಗುತ್ತಾ ಹೋಗುವುದನ್ನು ಕಾಣಬಹುದಾಗಿದೆ. ಅವಳು ಪುಟಕ್ಕಿಟ್ಟ ಚಿನ್ನದಂತೆ ಹೆಚ್ಚು ಹೆಚ್ಚು ಪ್ರಕಾಶಿಸುತ್ತಾ ಹೋಗುತ್ತಾಳೆ.

ಚಂದನವ ಕಡಿದು ಕೊರೆದು ತೊದೊಡೆ
ನೊಂದನೆಂದು ಕಂಪ ಬಿಟ್ಟತ್ತೆ?
ತಂದು ಸುವರ್ಣವ ಕಡಿದೊರೆದೆಡೆ ಬೆಂದು ಕಳಂಕ ಹಿಡಿದೆತ್ತೆ?
ಸಂದು ಸಂದನು ಕಡಿದು ಕಬ್ಬನು, ತಂದು ಗಾಣದಲ್ಲಿಕ್ಕೆ ಅರೆದಡೆ
ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟತ್ತೆ? .......

ಇಲ್ಲಿ ಭಾವದ ಅಭಿವ್ಯಕ್ತಿಗೆ ತಕ್ಕಂತೆ, ಪ್ರಾಸವಿರುವುದರಿಂದ ಚರಣಗಳು ಹಿಗ್ಗುವುದು ಹೋಗುವುದು ಕೂಡ ಗಮನಾರ್ಹವಾದದ್ದಗಿದೆ. ಇಲ್ಲಿ ಕಂಡುಬರುವ ಹೋಲಿಕೆ ವಿವಿಧ ಬಗೆಯ ಪರೀಕ್ಷೆಗಳಿಗೆ ಒಳಗಾಗುವ ಕ್ರಿಯೆ. ಇವುಗಳೆಲ್ಲವೂ ಭಕ್ತನ ವೈಶಿಷ್ಯವನ್ನು ತಾನೇ ತಾನಾಗಿ ಚಿತ್ರಿಸುತ್ತದೆ. ಇದೊಂದು ವ್ಯಕ್ತಿನಿಷ್ಠ ವಚನ. ಆಕೆಯ ಒಳಗಿನಿಂದೇ ವ್ಯಕ್ತಿತ್ವವೂ ಸ್ಥಿರಿಸಿ, ಕಾವ್ಯದ ಸೌಂದರ್ಯವನ್ನು ಹೊತ್ತುನಿಂತಿದೆ. ಅವಳ ದೃಷ್ಟಿಯಲ್ಲಿ ಕಾಮ ಕ್ರೋಧಗಳೇ ಭವಿತನವನ್ನು ಕುರಿತಾದ ಅವಳ ಇಲ್ಲಿಯ ವ್ಯಾಖ್ಯಾನ ಅವಳ ವೈಚಾರಿಕತೆಯನ್ನು ಸೂಚಿಸುತ್ತದೆ.

ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಲಗಣ ವಿಷವ ಬಯಕೆ ಬಿಡದನ್ನಕ್ಕ
ಹಾಡಿದಡೇನು, ಕೇಳದಡೇನು
ತನ್ನಲ್ಲುಳ್ಳ ಅವಗುಣ ಬಿಡದನ್ನಕ್ಕ .......

ಈ ವಚನದಲ್ಲಿ ಬರುವ ಸರ್ಪನ ದೃಷ್ಟಾಂತ ಕಾವ್ಯದ ವ್ಯಂಜಕ ಸಾಮಾಗ್ರಿಯಾಗಿ ಬಾಹ್ಯಾಡಂಬರದ ಭಕ್ತಿಗೆ ಬೆಲೆಯಿಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಆದರೆ ಸಮಾಜದ ಓರೆ ಕೋರೆಗಳನ್ನು ಅಕ್ಕ ಗಮನಿಸಿರುವ ದೃಷ್ಟಿ ವಿಶೇಷವಾಗಿದೆ. ಆದರೆ ಬಸವಣ್ಣ ಅಲ್ಲಮರಂತೆ ಹೆಚ್ಚು ಇಂತಹ ವಚನಗಳು ಅಕ್ಕನಲ್ಲಿ ಕಂಡುಬರುವುದಿಲ್ಲ. ಅವಳೇ ಹೇಳುವಂತೆ ನಮಗೆ ನಮ್ಮ ಲಿಂಗದ ಚಿಂತೆ. ನಮಗೆ ನಮ್ಮ ಭಕ್ತರ ಚಿಂತೆ. ನಮಗೆ ನಮ್ಮ ಆದ್ಯರ ಚಿಂತೆ ನಮಗೆ ನಮ್ಮ ಚನ್ನಮಲ್ಲಿಕಾರ್ಜುನಯ್ಯನ ಚಿಂತೆಯಿಲ್ಲದೆ ಲೋಕದ ಮಾತು

ಮನಗೇಕಯ್ಯ. ಪ್ರಾಸಂಗಿಕವಾಗಿ ಅನಿವಾರ್ಯವೆನಿಸಿದಲ್ಲಿ ತನ್ನ ಲೋಕಾನುಭವಗಳನ್ನು ಮಹಾದೇವಿ ಪ್ರಕಟಿಸಿದ್ದಾಳೆ.

**ಕಾವ್ಯ ಸೌಂದರ್ಯ:**

ಸೂಕ್ಷ್ಮ ಸಂವೇದನಾಶೀಲಳಾದ ಅಕ್ಕ ತನ್ನ ಅಂದಂದಿನ, ಅವತ್ತಿನ ಅನುಭವಗಳಿಗೆ ವಚನಗಳು ಆಕಾರ ಕೊಟಿರುವುದರಿಂದ ಅವಳ ವಚನಗಳು ಒಂದಲ್ಲ ಒಂದು ರೀತಿಯಲ್ಲಿ ಕವಿತೆಯ ಹೊಳಹುಗಳಾಗಿ ಕಂಡುಬರುತ್ತವೆ. ಅಲ್ಲಿಗಲ್ಲಿಗೆ ಬರುವ ಉಪಮೆ, ದೃಷ್ಟಾಂತಗಳು ಜೀವನದ ಸಾರೆಭಕ್ತಿಗಳು ಅರ್ಥವಂತಿಕೆಯಿಂದ ಹೆಚ್ಚಿನದಾಗಿ ಕಾವ್ಯದ ಧ್ವನಿಶಕ್ತಿಯಿಂದ ಎಲ್ಲರ ಗಮನ ಸೆಳೆಯುತ್ತವೆ. ಕೆಲವು ವಚನಗಳಂತೂ ಅದರಲ್ಲೂ ಕೆಲವೊಂದು ಉಕ್ತಿಗಳಂತೂ ಕಣ್ಣು ಕೋರೈಸಿ ಕೋಲ್ಮಿಂಚಿನ ಶಕ್ತಿಯನ್ನು ಹೊಂದಿವೆ. ಅಂತಹ ಒಂದು ಉಕ್ತಿಯನ್ನು ನೋಡಬಹುದು.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣರಿಗಳೂ ಚೇಷ್ಟೆಗೆ ಮನವೇ ಬೀಜ

ಸಮಸ್ಟಿ ಹಾಗೂ ವೃಷ್ಟಿಯ ಒಂದೇ ಬಗೆಯ ಚಲನಶೀಲತೆಯನ್ನು ಇಷ್ಟು ಸಹಜವಾಗಿ ವೈಜ್ಞಾನಿಕವಾಗಿ ಎರಡೇ ಎರಡು ವಾಕ್ಯದಲ್ಲಿ ಹಿಡಿದಿಡುವ ಪ್ರಯತ್ನ ಬೇರೆಡೆ ನಮಗೆ ದೊರೆಯುವುದು ದುರ್ಲಭ.

ನಾಳೆ ಬರುವುದು ನಮಗಿಂದೇ ಬರಲಿ
ಇಂದು ಬರುವುದು ನಮಗೀಗಲೆ ಬರಲಿ
ಆಗಾಗ ಎನ್ನದಿರು ಚನ್ನಮಲ್ಲಿಕಾರ್ಜುನ

ಇದು ಅಕ್ಕನ ಕಾವ್ಯ ವೈಶಿಷ್ಟ ಜೀವನ ಪ್ರೀತಿ ಅದನ್ನು ಎದುರಿಸುವ ಧಾಷ್ಟತ್ಯ, ಮನುಷ್ಯನ ಚಲನವಲನಗಳಲ್ಲಿ ಜಗತ್ ಬಾಲಕನ ಲೂಲೆಯಂತೆ ನಡೆಯುತ್ತದೆ ಎಂದು ತನ್ನ ಅನುಭವದ ಹಿನ್ನೆಲೆಯಲ್ಲಿ ಮಹಾದೇವಿ ಹೀಗೆ ಹೇಳುತ್ತಾಳೆ.

ಅಕ್ಕಮಹಾದೇವಿ ಕನ್ನಡದ ಅನುಭಾವಿಗಳಲ್ಲಿ ತನ್ನದೇ ವೈಶಿಷ್ಟ್ಯದಿಂದ ಬೆಳಗುತ್ತಿರುವ ಶುಕ್ರತಾರೆ. ವಚನ ಸಾಹಿತ್ಯದಲ್ಲಿ ಅವಳ ವಾಣಿಗೆ ಅವಳದೇ ಹೊಳಪು, ತೇಜಸ್ಸುಗಳಿವೆ. ಅಕ್ಕನೊಂದು ಮಹಿಳಾ ಸೃಷ್ಟಿಯ ಅದ್ಭುತ ಎಂದು ಸಿದ್ದಯ್ಯ ಪುರಾಣಿಕರು ಬಣ್ಣಿಸಿದ್ದಾರೆ. ಅದು ಸತ್ಯವನ್ನೇ ನಿರೂಪಿಸುವ ಉಕ್ತಿ. ಏಕೆಂದರೆ ಅಕ್ಕನ ಅಗಾಧವಾದ ಭಾಷಾ ಸಾಮರ್ಥ್ಯ. ಸುಸಂಸ್ಕೃತ ಭಾವ, ಪ್ರತಿಪಾದನೆಯ ಪರಿಣತಿಗಳು, ಆಕೆಯ ವೈವಿಧ್ಯಮಯವೂ ವ್ಯಾಪಕವೂ ಆದ ಜೀವಾನುಭವಕ್ಕೆ ಸಹಜತೆಯನ್ನು ನೀಡುತ್ತವೆ. ಬದುಕಿನ ಚಿರಂತನ ಮೌಲ್ಯಗಳ ಅನ್ವೇಷಣೆ ನಡೆಸುವ ಅಕ್ಕನ ವಚನಗಳೂ ವಾಚ್ಯವೆನಿಸಿದರೂ ನಿಗೂಢವಾದ ವಿಶಿಷ್ಟಾರ್ಥ

ತರಾವರಿಗಳನ್ನು ಹೊರಡಿಸಬಲ್ಲ ಧ್ವನಿಶಕ್ತಿಯಿಂದ ಗಮನಾರ್ಹವಾಗಿದೆ. ಅಕ್ಕನ ವಚನಗಳು ಭಕ್ತಿ ಸಾಧನೆಗಳ ನಿಜವಾದ ಸ್ವರೂಪವನ್ನೂ ಒಟ್ಟಾಗಿಯೇ ವಿಮರ್ಶಿಸುತ್ತಾ ಚಿಂತನೆಯೇ ಕಾವ್ಯವಾಗಿ ಬಿಡುತ್ತದೆ.

ಸಾಹಿತ್ಯ ನಿರ್ಮಾಣವಾಗಲಿ ತತ್ವೋಪದೇಶವಾಗಲಿ ಅಕ್ಕನ ವಚನಗಳ ಉದ್ದೇಶವಾಗಿಲ್ಲ. ಆಧ್ಯಾತ್ಮ ಸಾಧಕಿಯಾದ ಆಕೆಯ ಸ್ವಾನುಭವದ ಅಭಿವ್ಯಕ್ತಿ ಜೀವಾಳವಾಗಿರುವ ಆಕೆಯ ವಚನಗಳಲ್ಲಿ ಪ್ರೇಮಯೋಗ ಲಿಂಗಭಕ್ತಿ ನಿಷ್ಠೆ ನಿರ್ಭರವಾಗಿ ಹರಿದಿದೆ. ಅಂತೆಯೇ ಅವುಗಳಿಗೆ ಕಾವ್ಯದ ಲೇಪ ಬಂದಿದೆ. ಈ ಹಿನ್ನಲೆಯಲ್ಲಿ ಅಕ್ಕನ ವಚನಗಳು ಕನ್ನಡ ಸಾರಸ್ವತ ಲೋಕದ ಆಸ್ತಿಯೆನಿಸುತ್ತವೆ.

## ಆಧಾರ ಗ್ರಂಥಗಳು

1. ಡಾ.ಎಲ್. ಬಸವರಾಜು. ಸಂಪಾದಕರು –ಅಕ್ಕನ ವಚನಗಳು
2. ಅಕ್ಕಮಹಾದೇವಿ – ಗುರುಲಿಂಗ ಕಾಪಸೆ.
3. ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ –4, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
4. ಡಾ. ಬಸವರಾಜ ಸರ್ಬದ. – ವಚನ ಚಳವಳಿ
5. ವಿದ್ವಾನ್. ಎಂ.ಶಿವಕುಮಾರ ಸ್ವಾಮಿ.( ಸಂ) – ವಚನ ವೈಭವ
6. ಬಸವೇಶ್ವರರ ಸಮಕಾಲೀನರು – ಬಸವ ಸಮಿತಿ (ಬೆಂಗಳೂರು).